ಹೆಚ್ಚೆನಿಸಿದಂತಾಗಿ ವಿನಿತಾ ಕಸಿವಿಸಿಗೊಂಡಳು. ಪ್ರಾಡಕ್ಟ್‌ನ ಸಂಪೂರ್ಣ ವಿವರವನ್ನ ಒಂದು ಪೆನ್‌ಡ್ರೈವ್‌ಗೆ ಕಾಪಿ ಮಾಡುತ್ತ 'ನೀವು ಈ ಕಂಪ್ಯೂಟರ್ ಉಪಯೋಗಿಸಿ. ಡೆಸ್ಕ್‌ಟಾಪ್ ಮೇಲೆ ಬೆಕ್ಕಿನಕಣ್ಣು ಅನ್ನೋ ಫೈಲ್ ಇದೆ ನೋಡಿ... ಏನಾದರೂ ಸಂದೇಹ ಇದ್ದರೆ ನಾನು ಆ ಕಡೆ ಕೌಂಟರ್‌ನಲ್ಲಿದ್ದೇನೆ. 204 ಗೆ ಫೋನ್ ಮಾಡಿ' ಎಂದಳು. ತನಗಿಟ್ಟ ಕಾಫಿ ಅವನಿಗೆ ಕೊಡುತ್ತ ತಾನು ಆಫೀಸ್‌ಬಾಯ್ ಹತ್ತಿರಕ್ಕೆ ನಡೆದಳು.

ಮಾತಿಗೊಮ್ಮೆ ಆಕ್ಚುವಲೀ ಅನ್ನುತ್ತಿದ್ದ ಈ ಆಸಾಮಿ ಅದು ಹೇಗೆಗೋ ಓರೆಕೋರೆ ಗೆರೆಗಳ ಮುಖೇನ ವಿನಿತಾಳ ಹೊಸಪ್ರಾಜೆಕ್ಟ್‌ನ ರೇಖಾಚಿತ್ರಗಳನ್ನ ಬಿಡಿಸಿದ್ದ. ಸಿಇಓ ಅವನ ಕಲಾಕೌಶಲಕ್ಕೆ ಬೆರಗಾಗಿದ್ದರು. ಈಗ ಹೊಸ ಯೋಜನೆ ಲಾಂಚ್ ಆಗುವವರೆಗೂ ಇಬ್ಬರೂ ಜೊತೆಯಲ್ಲಿ ಕೆಲಸ ಮಾಡತೊಡಗಿದರು. ಅವನೊಂದಿಗಿನ ಒಡನಾಟದಲ್ಲಿ ಆತ್ಮರತಿಯ ಸ್ವಾನಾಂದದ ಅತಿರೇಕಗಳು ಕಮ್ಮಿಯಾದವು. ಸಾಯಂಕಾಲ ಮತ್ತು ಭಾನುವಾರಕ್ಕೊಮ್ಮೆ ಕಲಾಕ್ಷೇತ್ರದಲ್ಲಿ ನಾಟಕ, ಸಾಹಿತ್ಯಕ ಸಂವಾದ, ಸಿನಿಮಾ, ಕಲಾಗ್ಯಾಲರಿ, ಪೇಂಟಿಂಗ್ ಪ್ರದರ್ಶನ, ಚಿತ್ರಜಾತ್ರೆ —ಹೀಗೆ ಬಿಡುವಿದ್ದಾಗಲೆಲ್ಲ ಒಂದಿಲ್ಲೊಂದು ಕಾರ್ಯಕ್ರಮಗಳನ್ನು ಅವನೊಂದಿಗೆ ಅಟೆಂಡ್ ಮಾಡತೊಡಗಿದಳು. ಅವನ ಸಖ್ಯದಲ್ಲಿ ಜೀವನೋತ್ಸಾಹ ಸಿಕ್ಕಲಾರಂಭಿಸಿತು. ಯಾಕೋ ಅವನ ವಿಚಿತ್ರ ವೇಷಭೂಷಣಗಳಿಗೂ ಅವನ ಇರುವಿಕೆಗೂ ತಾತ್ವಿಕವಾದ ಹಿನ್ನೆಲೆಯಿರುವುದು ಅನುಭವಕ್ಕೆ ಬರತೊಡಗಿತು.



ಅರೇ! ಹೌದಲ್ಲ, ನಮ್ಮಿಷ್ಟದಂಗ ನಾವಿರಬೇಕು. ಈ ಪ್ರಪಂಚದಲ್ಲಿ ಗಾಳಿ, ನೀರು, ಬೆಳಕು, ಪ್ರೀತಿ, ಮೋಹ, ವ್ಯಾಮೋಹ, ಅಂತಃಕರಣ ಎಲ್ಲವೂ ಮನಸಿಗೆ ತಕ್ಕಂತೆ ವರ್ತಿಸುತ್ತದಲ್ಲ ಅನಿಸಿತು. ಅವ್ವನ ಸಲುವಾಗಿ ವಿಬತ್ತಿಕುಂಕುಮ, ಅಪ್ಪನ ಸಲುವಾಗಿ ಮೈತುಂಬ ಅರಿಬಿ ಹಾಕೋದು, ಇನ್ನಾರೋ ಹೇಳಿದರೂಂತ ನಮ್ಮ ಬದುಕನ್ನ ನಾವೇ ನಿಯಂತ್ರಣದಲ್ಲಿಟ್ಟುಕೊಳ್ಳುತ್ತೇವೆ. ಆದರೆ, ಈ ವೈರಮುಡಿ ಎಲ್ಲರಂತಲ್ಲ. ಇರುವುದನ್ನೆ ಲೇಪಹಚ್ಚಿ ಬಣ್ಣಕೊಟ್ಟು ವ್ಯಾಪಾರ ಮಾಡುವ ಈ ಜಗತ್ತಿನಲ್ಲಿ ಇವನ ಲೋಕ ಕ್ಷಿತಿಜದ ಕೆಳಗೆ ಹಾಯಾಗಿದೆ ಎನಿಸಿತು. ಯಾವದಕ್ಕೂ ಅವಸರವಿಲ್ಲ.

ಆತುರಕ್ಕಾಡಿ ಆರು ತಿಂಗಳಿಗೆ ಹಡೆದವರಂತೆ ಜಿಗಿಯುವ ವಿದೇಶಿ ಸರಕುಗಳ, ಲೆಕ್ಕಾಚಾರಗಳ ನಡುವೆ ನೆಮ್ಮದಿಯ ಬೆಳಕು ಕಂಡವಳಂತೆ ಅವನ ಇರುವಿಕೆಯನ್ನು ಮನಸಾರೆ ಒಪ್ಪಿಕೊಂಡಳು. ಮೃದುಮನಸ್ಸಿನ ಅವನ ಕಲಾಉತ್ಪನ್ನಗಳಂತೆ ಅವನೂ ತನ್ನದೊಂದು ಜಿನುಗುವ ಭಾವವೆಂದುಕೊಂಡಳು. ಪರಂಪರೆಯ ಬಗ್ಗೆ ಎಷ್ಟೊಂದು ತಿಳಿವಳಿಕೆ ಇದೆಯಲ್ಲಾ ಅನಿಸಿತು. ಹಳದಿ ಬಣ್ಣವೆಂಬುದು ಮದ, ಬಲಾಢ್ಯದ ಸಂಕೇತವೆಂದೂ ಆ ಬಣ್ಣವನ್ನು ಮದುಮಕ್ಕಳಿಗೆ ಹಚ್ಚುತ್ತಾರೆಂದೂ... ಆ ಕಾರಣಕ್ಕಾಗಿಯೇ ರುದ್ರದೇವತೆಯರ ಹಣೆಯಲ್ಲಿ ಹಳದಿ ಭಂಡಾರ ಇರುತ್ತದೆ ಎಂದ. ಅರೇ ಹೌದಲ್ಲ! ಗುಡ್ಡದ ಎಲ್ಲವ್ವನ ಜಾತ್ರೆಯೂ ಹಳದಿಮಯವಾಗಿರುತ್ತದೆ. ಒಂದೊಂದು ಬಣ್ಣಕ್ಕೂ ಬಣ್ಣ ಸೃಷ್ಟಿಸುವ ಭಾವನೆಗಳಿಗೂ ಕತೆಗಳನ್ನು ಹೇಳುತ್ತ ವಿನಿತಾಳ ಮೈಮನಸ್ಸಲ್ಲಿ ಹೊಕ್ಕ. ಅವನ ಒಂದೊಂದು ಮಾತುಗಳನ್ನೂ ತನ್ನ ಬಾಲ್ಯದೊಂದಿಗೆ